ಶ್ರೀ ಮಳ್ಳೂರು ಆನಂದರಾವ್:—ಮಾನ್ಯ ಸಚಿವರ ತಲೆ ನೆಟ್ಟಗಿಲ್ಲ

ಅಧ್ಯಕ್ಷರು :—ತಮ್ಮ ನಾಯಕರು ಮಾತನಾಡುವಾಗ, ತಾವು ಏತಕ್ಕೆ ಎದ್ದು ನಿಂತು ಮಾತನಾಡುತ್ತಿರುವಿರಿ ?

ಶ್ರೀ ಮಳ್ಳೂರು ಆನಂದರಾವ್ :—ಮಾನ್ಯ ಸಚಿವರು ಹೇಳಿದ್ದನ್ನು ಕಡತದಿಂದ ತೆಗೆದು ಹಾಕಿಸಿ, ಅವರಿಗೆ ಛೀಮಾರಿ ಹಾಕಿ. ಇಲ್ಲದಿದ್ದರೆ ನಾವೂ ಸಹ ಅವರನ್ನು ಬೆಪ್ಪು, ಹುಚ್ಚು ಎಂದು ಹೇಳ ಬೇಕಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್ :—ನಾನು ಕೇಳಿರುವ ಪ್ರಶ್ನೆ ಅಸಂಬದ್ಧವಲ್ಲ ೧೯೭೭ ರ ಚುನಾವಣೆ ಫಲಿತಾಂಶ ನೋಡಿದರೆ, ಎರಡು ಪದವೀಧರ ಮತ್ತು ಎರಡು ಶಿಕ್ಷಕರ ಕ್ಷೇತ್ರಗಳಲ್ಲಿ ಜನತಾ ಪಕ್ಷದ ಅಭ್ಯರ್ಥಿಗಳೇ ಗೆದ್ದು ಬಂದಿದ್ದಾರೆ. ಅದಕ್ಕಾಗಿ, ತಮಗೆ ಆ ಕ್ಷೇತ್ರಗಳನ್ನು ರದ್ದು ಮಾಡುವ ಸೇಡಿನ ಮನೋಭಾವವಿದೆಯೇ ಎಂದು ನಾನು ಕೇಳಿದೆನು. ಆದರೆ, ಆ ಪ್ರಶ್ನೆಗೆ ಮಾನ್ಯ ಮಂತ್ರಿಗಳು ನೀಡಿದ ಉತ್ತರದಿಂದ, ಅವರು ತಲೆಯನ್ನು ಸಮಾನವಾಗಿಟ್ಟುಕೊಂಡು ಉತ್ತರ ಕೊಡಲಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಮಾನ್ಯ ಸಚಿವರು ಸಹನೆಯಿಂದ ಮಾತನಾಡಬೇಕಾಗುತ್ತದೆ. ಸರ್ಕಾರದ ಈ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ತಿರಸ್ಕರಿಸಲಿಲ್ಲವೆ ?

ಶ್ರೀ ಕೆ. ಹೆಚ್. ರಂಗನಾಥ್ :—ಕೇಂದ್ರ ಸರ್ಕಾರದಿಂದ ನಮಗೆ ಯಾವ ಉತ್ತರವೂ ಬಂದಿಲ್ಲ.

Upper Tungabhadra Scheme

415 SRI T. SOMMAPPA : (Kudligi) — Will the Chief Minister be pleased to state :—

(*a*) whether it is a fact that Plans and Estimates for Upper Thungabhadra Scheme were prepared ;

(*b*) whether it is a fact that the scheme was suddenly given up ;

(*c*) if so, the reasons for the same ;

(*d*) whether as against this scheme, the Uppar Krishna Project has been given preference and if so, the reasons for this discremination in taking up Upper Thungabhadra Project ?

SRI D. DEVARAJ URS (Chief Minister):—

(*a*) Yes.

(*b*) Subsequently alternative schemes are being examined.

(*c*) *Vide* reply above.

(*d*) This is not correct.

ಶ್ರೀ ಟಿ. ಸೋಮಪ್ಪ :—ಮಾನ್ಯ ಮಂತ್ರಿಗಳು (ಅ) ಪ್ರಶ್ನೆಗೆ ಉತ್ತರವಾಗಿ, ಪರ್ಯಾಯ ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿರುವರು. ಹಾಗಾದರೆ, ಆ ಪರ್ಯಾಯ ಯೋಜನೆಗಳಾವುವು ?

† ಶ್ರೀ ಡಿ. ದೇವರಾಜ ಅರಸ್ :—ಮೊದಲು ತುಂಗಭದ್ರ ಮೇಲ್ದಂಡೆ ಯೋಜನೆಯನ್ನು ಮಾಡಬೇಕೆಂದಿದ್ದದ್ದು ನಿಜ. ಈಗ ಕೃಷ್ಣಾ ವಾಟರ್ ಟ್ರಿಬ್ಯೂನಲ್ ನವರು ಒಂದು ತೀರ್ಮಾನ ಕೊಟ್ಟಿದ್ದಾರೆ. Thungabhadra river is a tributary to Krishna river. ತುಂಗಭದ್ರ ವ್ಯಾಲಿಯಲ್ಲಿ ಇಷ್ಟು ನೀರನ್ನು ಮಾತ್ರ ಉಪಯೋಗ ಮಾಡಬೇಕು : ಅದರ ಮೇಲೆ ಮಾಡಬಾರದೆಂದು ತೀರ್ಮಾನ ಮಾಡಿದ್ದಾರೆ. ಆ ತೀರ್ಮಾನದಂತೆ ನಾವು ನೀರನ್ನು ಉಪಯೋಗ ಮಾಡಬೇಕಾಗುತ್ತದೆ. ಆದರಿಂದಾಗಿ, ನಾವು ಮೊದಲು ಹಾಕಿಕೊಂಡಿದ್ದ ಯೋಜನೆಯನ್ನು ನಡೆಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ನನಗೆ

ಜ್ಞಾಪಕವಿರುವ ಹಾಗೆ ಇದರಲ್ಲಿ ೩೦ ಸಿ. ಎಂ. ಟಿ.ಎಫ್. ಟಿ ನೀರನ್ನು ನಿಲ್ಲಿಸಬೇಕೆಂದು ಯೋಜನೆ ಇತ್ತು ; ಆದರೆ ಅಷ್ಟನ್ನು ನಿಲ್ಲಿಸಲಿಕ್ಕೆ ಅವಕಾಶ ಕೊಡುತ್ತಿಲ್ಲ. ೯ ಸಿ. ಎಂ. ಟಿ. ಎಫ್. ಟಿ. ನೀರನ್ನು ಪೂರ್ತ ಉಪಯೋಗ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಅಲ್ಲಿ ಯಾತ ನೀರಾವರಿ ಯೋಜನೆ ಮಾಡ ಬೇಕೇ ಅಥವಾ ಬೇರೆ ಯೋಜನೆ ಮಾಡಬೇಕೇ ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ ;—ತುಂಗಭದ್ರ ಮೇಲ್ದಂಡೆ ಯೋಜನೆಯಿಂದ ರಾಣಿಬೆನ್ನೂರು, ಕೂಡ್ಲಿಗಿ ಮುಂತಾಗಿ ಇನ್ನೂ ಮೂರು-ನಾಲ್ಕು ತಾಲ್ಲೂಕುಗಳ ಜಮೀನುಗಳಿಗೆ ನೀರುಣಿಸುವ ಯೋಜನೆ ಯಿತ್ತು. ಈಗ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರದವರು ಪರಿಶೀಲಿಸುತ್ತಿರುವುದರಿಂದ, ಆದರ ವಿವರಗಳನ್ನು ಕೊಡುವರೆ ?

ಶ್ರೀ ಡಿ. ದೇವರಾಜ ಅರಸ್ :—ಈಗ ಅಲ್ಲಿ ಗಾಜನೂರು ಅಣೆಕಟ್ಟು ಏನಿಯಾ ಇದೆ; ಮತ್ತೆ ಲಿಫ್ಟ್ ಇರಿಗೇಷನ್ ಮಾಡುವುದು— these are the matters which we are looking into. I would have with great pleasure welcomed it but unfortunately, the tribunals award is there. I cannot go beyond the limit. That is the difficulty.

SRI G. B. SHANKARA RAO :—The proposed project was down below Honnali. Will the Hon. Chief Minister consider the question of providing water to those people who are expecting water from this project down below Honnali by means of lift irrigation and some other schemes ?

SRI D.DEVARAJ URS ;— There are three proposals – – (1) Gajanoor across Thungabhadra ; (ii) Biranpur across Thugabhadra and (iii) Shingatellur across Thungabhadra. We have now been thinking of lift irrgation scheme at Shingatellur utilising about 8 TMCfts of water. ಅದನ್ನು ಮಾಡಬೇಕಾದರೆ ಗ್ರಾವಿಟಿ ಫ್ಲೋ ನೋಡಿಕೊಂಡು ಮಾಡುವುದಕ್ಕೆ ಸಾಧ್ಯವೆ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಈ ವಿಷ್ಟರಲ್ಲಿ ಯಾವುದನ್ನಾದರೂ ಮಾಡುತ್ತೇವೆ.

ಶ್ರೀ ಜಿ. ಬಿ. ಶಂಕರರಾವ್ : — ಹಿಂದೆ ಉದ್ದೇಶಿಸಲಾಗಿದ್ದ ಯೋಜನೆ ಪ್ರಕಾರ ತುಂಗಭದ್ರ ಮೇಲ್ದಂಡೆ, ಅಂದರೆ ಹೊನ್ನಾಳಿ ಮತ್ತು ಬೈರಂಪೂರ್ ಮಧ್ಯದಲ್ಲಿ ಪ್ರಾಜೆಕ್ಟ್ ಮಾಡಿ ೬೦-೭೦ ಸಾವಿರ ಎಕರೆಗೆ ನೀರು ಒದಗಿಸುವುದಾಗಿತ್ತು, ಅಲ್ಲಿನ ಜನರೂ ಬಹಳ ಆಸೆ ಇಟ್ಟುಕೊಂಡಿದ್ದರು. ಆದರೆ, ಇವತ್ತು ಆ ಯೋಜನೆಯನ್ನು ಅಲ್ಲಿಂದ ಷಿಫ್ಟ್ ಮಾಡಿಬಿಟ್ಟರೆ ಅಲ್ಲಿನ ಜನರಿಗೆ ಬಹಳ ನಿರಾಶೆಯಾಗುತ್ತದೆ. ಆದುದರಿಂದ, ಯಾವುದಾದರೊಂದು ರೂಪದಲ್ಲಿ ಅಲ್ಲಿನ ಜಮೀನುಗಳಿಗೆ ನೀರನ್ನೊದಗಿಸುವುದಕ್ಕೆ ವ್ಯವಸ್ಥೆ ಮಾಡುವಿರಾ ?

ಶ್ರೀ ಡಿ. ದೇವರಾಜ ಅರಸ್ : — ನಿಮ್ಮ ಹಿರೇಕೆರೂರಿಗೆ ನೀರು ಬರುವುದಕ್ಕೆ ಸಾಧ್ಯವೇ ಎನ್ನುವ ಮಾತೊಂದನ್ನೂ ಕೇಳಿಬಿಡಿ ! ಗಾಜನೂರು, ಬೈರಂಪೂರ್ ಮತ್ತು ಶಿಂಗತಲ್ಲೂರು ಪ್ರದೇಶಗಳಿಗೆ ಯಾತ ನೀರಾವರಿ ಯೋಜನೆ ಮಾಡುತ್ತಾ ಹೋದರೆ, ನಮ್ಮ ಅಭಿಪ್ರಾಯದಂತೆ ಸುಮಾರು ೧.೯ ಲಕ್ಷ ಎಕರೆಗೆ ನೀರು ಉಣಿಸುವುದಕ್ಕೆ ಸಾಧ್ಯವಾಗುತ್ತದೆ. ಹೊನ್ನಾಳಿ ತಾಲ್ಲೂಕು, ಶಿವಮೊಗ್ಗ ತಾಲ್ಲೂಕು, ಹಿರೇಕೆರೂರು ತಾಲ್ಲೂಕು, ರಾಣಿಬೆನ್ನೂರು ತಾಲ್ಲೂಕು ಹಾವೇರಿ ತಾಲ್ಲೂಕು, ಮುಂಡರಗಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕು— ಇವೆಲ್ಲವನ್ನೂ ಸೇರಿಸಿ ಮಾಡೋಣವೆಂತಲೂ ಇದ್ದೇವೆ. ಆದರೆ, ತೀರ್ಮಾನದ ಪ್ರಕಾರ ನಾವು ಎಷ್ಟು ನೀರನ್ನು ಉಪಯೋಗಿಸಬೇಕೋ ಅಷ್ಟನ್ನು ಮಾತ್ರ ಉಪಯೋಗಿಸಬೇಕಾಗಿದೆ. ಬಹುಶಃ ಈಗೇನು ಭತ್ತ ಬೆಳೆಯುವುದಕ್ಕೇನೂ ನೀರು ಕೊಡಬೇಕಾ ಗಿಲ್ಲ ; ಸೆಮಿ ಡ್ರೈ ಕ್ರಾಪ್‌ಗಳಿಗೆ ನೀರುಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ. ಇಷ್ಟು ನಾನ ತಮಗೆ ಭರವಸೆ ಕೊಡಬಲ್ಲೆ : ನಮ್ಮ ಭಾಗದ ನೀರನ್ನು ಗರಿಷ್ಠ ಪ್ರಮಾಣದಲ್ಲಿ ಎಲ್ಲಿಯವರೆಗೆ ಮಂತ ಎಷ್ಟು ದೂರ ಕೊಂಡೊಯ್ಯಲು ಸಾಧ್ಯವೋ ಅಷ್ಟು ದೂರ ನಾವು ಕೊಂಡೊಯ್ಯುವೆವು. ಭತ್ತವನ್ನೆ

ಬೆಳೆಯಬೇಕು. ಕಬ್ಬನ್ನೇ ಬೆಳೆಯಬೇಕೆಂಬ ಕನ್ಸೆಪ್ಟ್ ಈಗ ಬೇಡ. ಎರಡು-ಮೂರು ಸಲ ನೀರು ಬಿಟ್ಟು ಲೈಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡೋಣ. ಇದರ ಉಪಯೋಗ ಹೆಚ್ಚಿನ ಜನರಿಗೆ ಆಗುತ್ತದೆ. That is our idea. We will try our best.

MR. SPEAKER.— Question No 443 is held oevr Now I call the next Question.

1.30 P.M.

Loss of life and property following the agitation against the arrest of Smt. Indira Gandhi

508. SRI T. R. SHAMANNA (Basavanagudi).—Will the Chief Minister be pleased to state.—

(*a*) what has been the estimated loss of life and property on account of the recent agitation against the arrest of Smt. Indira Gandhi to the following.

(i) Corporation of the City of Bangalore.
(ii) Road Transport Corporation including B.T.S.
(iii) private property.
(iv) Government property.

SRI D. DEVARAJ URS (Chief Minister).—

(*a*) In the violent in cidents in Bangalore City, four persons died and thirty persons were injured, 160 Police personnel wore also injured

(i) it is now ascertained from the Corporation authorities that the approximate damage to the Corporation is about Rs. 1,10,000.
(ii) Rs. 2,62,520
(lii) About Rs. 61.00 Lakhs.
(vi) About Rs. 18.00 Lakhs (excluding the amount shown in Sl. No. (ii).

(The figure are as per the claims put forward).

ಶ್ರೀ ಟಿ. ಆರ್. ಶಾಮಣ್ಣ.—ದಿನಾಂಕ ೧೯ರ ಡಿಸೆಂಬರ್‌ನಲ್ಲಿ ನಡೆದಂತಹ ಆಕಸ್ಮಿಕ ಘಟನೆಗಳನ್ನು ತಪ್ಪಿಸುವ ವಿಚಾರದಲ್ಲಿ ಪೋಲೀಸಿನವರು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದರೆ ಆಗತಕ್ಕ ಅನಾಹುತವನ್ನು ತಪ್ಪಿಸಬಹುದಾಗಿತ್ತು ಎನ್ನುವುದು ನನ್ನ ಖಚಿತ ಅಭಿಪ್ರಾಯ. ಈ ಬಗ್ಗೆ ಸರ್ಕಾರದ ಅಭಿಪ್ರಾಯ ಏನು ?

† SRI D. DEVARAJ URS.—I cannot give answer to this.

ಶ್ರೀ ಟಿ. ಆರ್. ಶಾಮಣ್ಣ.—ತಾವು ಕೊಟ್ಟಿರತಕ್ಕ ವರದಿ ಪ್ರಕಾರ ಸುಮಾರು ೮೩ ಲಕ್ಷ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿದೆಯೆಂದು ಕೊಟ್ಟಿದ್ದಾರೆ. ಈ ರೀತಿ ವಿಧ್ವಂಸಕ ಕೃತ್ಯಗಳನ್ನು ಯಾರೇ ಮಾಡಿರಲಿ: ಕಾಂಗ್ರೆಸ್‌ನವರಾಗಿರಲೀ, ಜನತಾದವರಾಗಿರಲೀ, ಕನ್ನಡ ಚಳುವಳಿಗಾರರಾಗಿರಲೀ ಹಾಗೂ ಕಮ್ಯುನಿಸ್ಟ್‌ಪಕ್ಷದವರಾಗಿರಲೀ ಅಂತಹವರಿಗೆ ಸಾರ್ವಜನಿಕ ಸ್ಥಳದಲ್ಲಿ ಶಿಕ್ಷೆ ಕೊಡತಕ್ಕ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?